ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಹೃದಯದಿಂದ ಬರುವ ಮಾತು ಹೇಗಿರಬೇಕು ಸರ್?



ಕೊಂಚವೂ ಏರುಪೇರಿಲ್ಲದ ಲಬ್ ಡಬ್... ಲಬ್ ಡಬ್...

ಪಿ.ಎನ್. ಶ್ರೀವತ್ಸ, ಬೆಂಗಳೂರು
ಜೀವನ; ಇದರ ನಿಜವಾದ ಅರ್ಥ?
'ಜೀ...' ಎಂದು ಬಾಗದಿದ್ದರೆ ಬದುಕು ವನ (ಕಾಡು) ಎಂದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹೆಂಡತಿ ತಾಳಿ ತೆಗೆದಿಟ್ಟರೆ ಗಂಡ ಡೈವೋರ್ಸ್ ಕೇಳಬಹುದೆಂಬ ಕಾನೂನು ಬಂದರೆ?
ಪುನರಪಿ ತಾಳಿ; ಪುನರಪಿ ಕಾಳಿ; ಪುನರಪಿ ಮಡದಿ ಜೊತೆಗೇ ಜಗಳಂ ಆದೀತು.

ವಿ. ಹೇಮಂತಕುಮಾರ್, ಬೆಂಗಳೂರು
ಹೆಣ್ಣನ್ನು ಚಂದಿರನಿಗೆ ಹೋಲಿಸುವುದು ಸರಿಯೆ?



ಮೂರು ಯಾನಗಳಾದರೂ ಇನ್ನೂ ಸಾಕಷ್ಟು ರಹಸ್ಯ ಉಳಿಸಿಕೊಂಡಿರುವುದರಿಂದ, ಸರಿಯೇ.

ಕಾವ್ಯಶ್ರೀ ಪತ್ರಿಮಠ, ಸುರಪುರ
ಋಣಭಾರ ಎಂದರೆ?
ಇಲಾಜಿಲ್ಲದ ಮುಲಾಜು.

ಬಿ. ಚಂದ್ರೇಗೌಡ, ಬೆಂಗಳೂರು
ಶಾಲೆಯ ಶಿಕ್ಷಣಕ್ಕೂ, ಬದುಕಿನ ಶಿಕ್ಷಣಕ್ಕೂ ಏನು ವ್ಯತ್ಯಾಸ?
ಇದರಿಂದ ನೋಟು; ಅದರಿಂದ ನೋಟ.

ದೇವೇಂದ್ರ, ಕಡೂರು
ಜಗತ್ತಿನಲ್ಲಿ ಕೊರತೆ ಇಲ್ಲದಿರುವ ಮನುಷ್ಯ ಇರಲು ಸಾಧ್ಯವೆ?
ಕಲಾಂ, ಲಾಲ್ ಬಹದ್ದೂರ್ ಶಾಸ್ತ್ರಿ, ಬೆಳಗೆರೆ ಕೃಷ್ಣಶಾಸ್ತ್ರಿ... ತೃಪ್ತಿಯಿದ್ದಲ್ಲಿ ಕೊರತೆಯಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ
ನಶೆಗೂ, ನಿಶೆಗೂ ಏನು ಸಂಬಂಧ?
ಸುತ್ತಲಿರುವ, ಸೇವಿಸಿದರೆ ತಲೆ ಸುತ್ತಲಿರುವ ಕಪ್ಪೇ (cupಏ).

ಕೆ.ವಿ. ಗೋವಿಂದಾಚಾರಿ, ಮೈಸೂರು
ನಾಯಕರು ಫ್ಲೆಕ್ಸ್‌ಗಳಲ್ಲಿ, ಕಟೌಟ್‌ಗಳಲ್ಲಿ ಮಿಂಚುತ್ತಾ ಜನ್ಮದಿನ ಆಚರಿಸುತ್ತಾರಲ್ಲ, ಏನಂತೀರಿ?
ತಪ್ಪು ತಿಪ್ಪೆಯದಲ್ಲ; ಅದರ ಸುತ್ತ ಗುಂಪುಗೂಡುವ ಕೀಟಗಳದು.

ಎಂ.ಜಿ. ಉಮಾ, ಬಳ್ಳಾರಿ
ಕಲಬೆರಕೆ ರಾಜಕೀಯ ಎಂದರೇನು?
ಅದು ಈಗಿಲ್ಲ; ಈಗಿನದು ಖಳಬೆರಕೆ ರಾಜಕೀಯ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಅರಳಬೇಕಾದ ಯುವಮನಸ್ಸುಗಳು ಕೆರಳಿ ನರಳುತ್ತಿವೆಯಲ್ಲಾ ಸರ್?
ಅದಕ್ಕೆ ಇಂದಿನ ಗುರುಗಳು ಲಘುವಾಗುತ್ತಿರುವುದೇ ಕಾರಣವಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ನಮಗೆ ಜ್ಞಾನದ ಅರಿವು ಯಾವಾಗ ಮೂಡುತ್ತದೆ ಗುರುಗಳೇ?
ಅನಸ್ತೇಶಿಯಾದ ಎಫೆಕ್ಟ್ ಕಡಿಮೆಯಾಗಿ ನೋವು ಶುರುವಾದ ಕೂಡಲೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಹಂಬಲಿಸುವುದಕ್ಕೂ, ಹಪಹಪಿಸುವುದಕ್ಕೂ ವ್ಯತ್ಯಾಸವೇನು?
ಹಂಬಲ ಆಶೆಯ ಮಾರುತ; ಹಪಹಪಿ ಸುಂಟರಗಾಳಿ.

ಮಲ್ಲಿಕಾರ್ಜುನ, ಸುರಧೇನುಪುರ
ಮಾತಿಗಿಂತ ಕೃತಿ ಲೇಸು. ಕೃತಿಗಿಂತ...?
ಪ್ರಕೃತಿಯೇ ಮನುಜಪಾದಕ್ಕೆ ಲೇಸು, ಶೂಸು, ಪಾಲಿಷ್ಷು, ಎಲ್ಲವೂ.

## ಬಹುಮಾನಿತ ಪ್ರಶ್ನೆ

ಎಂ.ಸಿ. ಧನ್ಯತಾ, ಬೆಂಗಳೂರು
ಹೆಣ್ಣನ್ನು 'ನಾರಿ' ಎನ್ನುವುದೇಕೆ?
'ನ+ಅರಿ'; ಅರಿಸಮಾಸದಲ್ಲೂ ಅರಿಯಲು ಸಾಧ್ಯವಿಲ್ಲದವಳಾದ್ದರಿಂದ.

ಬಾ.ರಂ. ಸುರೇಶ್, ಶಿವಮೊಗ್ಗ
ಸರ್ಕಾರಿ ಆಸ್ಪತ್ರೆಗಳಿಗೂ, ಖಾಸಗಿ ಆಸ್ಪತ್ರೆಗಳಿಗೂ ಏನು ವ್ಯತ್ಯಾಸ ಶಿವಾ?
ಅಲ್ಲಿ ಮನುಷ್ಯತ್ವ ಮಾರಾಟಕ್ಕಿದೆ; ಇಲ್ಲಿ ಮನುಷ್ಯತ್ವ ಹರಾಜಾಗಿದೆ.

ಕೃಷ್ಣ ಕೊಡಂಚ, ಬೆಂಗಳೂರು
ಗೂಢ ಮತ್ತು ನಿಗೂಢ; ಇವುಗಳ ನಡುವಿನ ವ್ಯತ್ಯಾಸವೇನು?
ಗೂಢಕ್ಕೆ ನಡು ಇಲ್ಲ; ನಿಗೂಢಕ್ಕೆ 'ಗೂ' ನಡು!

ನಾರಾಯಣ ಯಾಜಿ, ಶಿರಾಲಿ
ನೀವು ಹಿರಿಯ ನಾಗರಿಕರೋ, ಕಿರಿಯ ನಾಗರಿಕರೋ?



ಕಿರಿಕಿರಿಯ ನಾಗರಿಕ.

ಬೂಕನಕೆರೆ ವಿಜೇಂದ್ರ, ಮೈಸೂರು
ಬಡವರು 'ಪ್ರಶ್ನೆ' ಕೇಳಬಾರದಾ?
ಕೇಳಬಹುದು – ಉತ್ತರ ಸಿಕ್ಕೇಸಿಗುವುದೆಂಬ ಆಶೆಯಿಲ್ಲದೆ!

ಎಚ್.ಎನ್. ಕಿರಣ್ ಕುಮಾರ್, ಹಳೇಹಳ್ಳಿ
ತಾನು ಜಾತ್ಯತೀತವೆನ್ನುವ ಪಕ್ಷವು ಕೋಮುವಾದಿಯೆನ್ನಲಾದ ಪಕ್ಷವನ್ನು ಅಪ್ಪಿ ಮುದ್ದಾಡಲು ಕಾರಣ?
ಎರಡೂ ಪಕ್ಷಗಳು 'ಅಧಿಕಾರ ಕಾಮವಾದಿ'ಗಳಾದ್ದರಿಂದ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಗಣೇಶನಿಗೆ ಆನೆಮುಖವನ್ನೇ ಏಕೆ ಹಚ್ಚಿದರು?
ಎಲ್ಲ ಭಕ್ತರ ಮೊರೆಯನ್ನು ಕೇಳಲು ಅಗಲವಾದ ಕಿವಿಯಿದ್ದರೆ ಉತ್ತಮವೆಂದು.

■ ರಾಮ್